www.ecourtsindia.com



4 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.

ದಿನಾಂಕ 07.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ವಾದಿ ಪರವಾಗಿ ಪಾಟೀ ಸವಾಲು ಶ್ರೀ ಎ ಎಂ ಡಿ ಕೆ ವಕೀಲರಿಂದಃ–**

ನಮ್ಮ ಪ್ರಾಧಿಕಾರವು ವಾದಿ ಹೆಸರಿಗೆ ದಾವಾಸ್ತಿಯ ಖಾತೆಯು ಕ್ರಯ ಪತ್ರದ ಆಧಾರದ ಮೇಲೆ ಬದಲಾವಣೆ ಆಗಿರುತ್ತದೆ. ದಾವಾಸ್ತಿಯ ಖಾತೆಯು ವಾದಿ ಹೆಸರಿಗೆ ಮಾಡುವ ಪೂರ್ವದಲ್ಲಿ ನಮ್ಮ ಪ್ರಾಧಿಕಾರದ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿ . ದಾವಾಸ್ತಿಯು ಖಾತೆಯು ವಾದಿ ಹೆಸರಿಗೆ ಬದಲಾವಣೆ ಆಗುವ ಪೂರ್ವದಲ್ಲಿ ಧನಲಕ್ಷ್ಮಿ ರವರ ಹೆಸರಿಗೆ ಖಾತೆ ಇತ್ತು ಎಂದರೆ ಸರಿ . ದಾವಾಸ್ತಿಯು ಈ ಹಿಂದೆ ಹಿರಿಯಾರು ಗ್ರಾಮ

This is a True Copy of the Court Records Online. Authenticated @ districts.ecourtsindia.com/cnr/KASM310003582024/truecopy/order-6.pdf

ಪಂಚಾಯತಿಯ ವ್ಯಾಪ್ತಿಗೆ ಬರುತ್ತಿತ್ತು ಎಂದರೆ ಸರಿ . ನಗರಸಭೆ ವ್ಯಾಪ್ತಿಗೆ ಬಂದ ನಂತರ ವಾರ್ಡ್ ನಂಃ 23 ಆಗಿರುತ್ತದೆ ಎಂದರೆ ಸರಿ . ಯಾವ ವರ್ಷದಿಂದ ಧನಲಕ್ಷ್ಮಿ ಹೆಸರಿಗೆ ದಾವಾಸ್ತಿಯ ಖಾತೆ ಇತ್ತು ಎಂದು ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯತಿಯಿಂದ ನಗರಸಭೆ ವ್ಯಾಪ್ತಿಗೆ ವರ್ಗಾವಣೆ ಆದ ನಂತರ ನಮ್ಮ ಪ್ರಾಧಿಕಾರಕ್ಕೆ ದಾಖಲೆಗಳನ್ನು ವರ್ಗಾಯಿಸಲಾಯಿತು ಎಂದರೆ ಸರಿ . ಧನಲಕ್ಷ್ಮಿ ರವರೇ ದಾವಾಸ್ತಿಗೆ ಸಂಬಂಧಪಟ್ಟಂತೆ ನಮ್ಮ ಪ್ರಾಧಿಕಾರಕ್ಕೆ ಕಂದಾಯವನ್ನು ಪಾವತಿ ಮಾಡುತ್ತಿದ್ದರು ಎಂದರೆ ಸರಿ . ತದನಂತರ ವಾದಿಯು ದಾವಾಸ್ತಿಯನ್ನು ನಿಪಿ-8 ನ್ನು ಧನಲಕ್ಷ್ಮಿ ರವರು ಬರೆದುಕೊಟ್ಟ ನಂತರ ನಮ್ಮ ಪ್ರಾಧಿಕಾರಕ್ಕೆ ಕಂದಾಯವನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ . ದಾವಾಸ್ತಿಯಲ್ಲಿ ವಾದಿಯು ಸ್ವಾಧೀನಾನುಭವವನ್ನು ಹೊಂದಿರುತ್ತಾರೆ ಎಂದರೆ ಸರಿ . 2 ನೇ ಪ್ರತಿವಾದಿ ಮಾತನ್ನು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ಕಾನೂನುಬದ್ಧವಾಗಿ ನಿಪಿ-8 ನ್ನು ಧನಲಕ್ಷ್ಮಿ ರವರಿಂದ ಬರೆಸಿಕೊಂಡು ನಿಪಿ-1 ಮತ್ತು 2 ರಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3. ದಾವಾಸ್ತಿಯು 1 ನೇ ಪ್ರತಿವಾದಿಗೆ ಸೇರಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವಾಸ್ತಿಯು ವಾದಿಗೆ ಸಂಬಂಧಪಟ್ಟಿದ್ದರೂ 1 ನೇ ಪ್ರತಿವಾದಿಗೆ ಸೇರಿದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ.ನ್ಯಾಸಾ.ಹೇ.ನನ್ನ ಉಕ್ತ ಲೇಖನದಂತೆ ಬೆ.ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಗಿರಿಜಾ ಎನ್)
4 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಭದ್ರಾವತಿ.

This is a True Copy of the Court Records Online. Authenticated @ districts.ecourtsindia.com/cnr/KASM310003582024/truecopy/order-6.pdf